ಅಜೇಯ

# ಕೂದಲಿಗೆ ಜೀವಾಳ ದಾಸವಾಳ

ಜಪಾ ಪುಷ್ಪ, ಔಂದ್ರ, ಪುಷ್ಪ, ತ್ರಿಸಂಧ್ಯಾ, ಪಿಂಡ ಪುಷ್ಪ, ರಕ್ತ ಪುಷ್ಪ, ಹೇಮ ಪುಷ್ಪ, ಅರ್ಕ ಪ್ರಿಯ, ಹರಿ ವಲ್ಲಭ, ಅರುಣಪುಷ್ಪ, ಎಂಬ ಹೆಸರುಗಳಿಂದ ಸಂಸ್ಕೃತದಲ್ಲಿ ದಾಸವಾಳವು ಗುರುತಿಸಿಕೊಳ್ಳುತ್ತದೆ. ತನ್ನ ಗುಣಗಳನ್ನು ಇದು ವ್ಯಕ್ತಗೊಳಿಸುವುದರಿಂದ ಜಪಾ, ಹೂವಿನಲ್ಲಿ ತೇಜಾಂಶ ಹೆಚ್ಚಿರುವುದರಿಂದ ಔಂದ್ರ, ತ್ರಿಸಂಧ್ಯಾ ಅಂದರೆ ಮೂರು ಸಂಧ್ಯಾಕಾಲಗಳವರೆಗೂ ಇರುವಂತಹದು, ದುಂಡಕ್ಕಿರುವ ಕಾರಣಕ್ಕೆ ಪಿಂಡ ಪುಷ್ಪ, ಕೆಂಪು, ಹಳದಿ, ಬೆಳ್ಳಗಿರುವುದರಿಂದ ರಕ್ತ, ಹೇಮ, ಅರುಣ ಪುಷ್ಪ. ಸೂರ್ಯೋದಯದೊಂದಿಗೆ ಅರಳುವುದರಿಂದ ಅರ್ಕ ಪುಷ್ಪ, ವಿಷ್ಣುವಿಗೆ ಬಲು ಪ್ರೀತಿ ಪಾತ್ರವಾದ ಕಾರಣ ಹರಿವಲ್ಲಭ.

ಧಾರ್ಮಿಕ ಕಾರಣಗಳಿಗೆ ಎಷ್ಟು ಪ್ರಸಿದ್ಧವೋ ಅಷ್ಟೇ ಪ್ರಸಿದ್ಧಿ ಔಷಧವಾಗಿಯೂ ಇದೆ. ಮಲೆನಾಡು ಪ್ರದೇಶಗಳಲ್ಲಿ ಅಡುಗೆಗೂ ಬಳಸುವುದುಂಟು. ದಾಸವಾಳದ ಎಲೆಯನ್ನು ಮತ್ತು ಹೂವನ್ನು ಕೂದಲಿಗೆ ಬಳಸುವ ಎಣ್ಣೆ, ಶಾಂಪೂ, ಮಾತ್ರೆಗಳಿಗೆ ಬಳಸುತ್ತಾರೆ. ಅತೀಯಾದ ಮುಟ್ಟಿನ ಸ್ರಾವ, ಬಿಳಿ ಮುಟ್ಟು, ಕೂದಲು ಉದುರುವಿಕೆ, ಹೊಟ್ಟು, ಬಾಲ ನೆರೆ, ಇಂದ್ರಲುಪ್ತ, ಹೃದಯದ ಮಾಂಸ ಪೇಶಿಗಳನ್ನು ಬಲಗೊಳಿಸಲು ದಾಸವಾಳದ ಬಳಕೆ ಆಗುವುದು.

ಭಾರತಾದ್ಯಂತ ಬೆಳೆಯುವ ಇದು ವರ್ಷವಿಡೀ ಹೂವನ್ನು ಬಿಡುವುದು. ಕೆಂಪು ಬಹು ಪರ್ಣಯುಕ್ತ ಹೂವು ಮತ್ತು ಬಿಳಿಯ ಹೂವ ಹೆಚ್ಚು ಔಷಧೀಯ ಗುಣಗಳನ್ನು ಹೊಂದಿರುತ್ತದೆ. ಅದು ಲಘು, ಗ್ರಾಹಿ ಉಷ್ಣ ಮತ್ತು ಕಹಿ ಇರುವುದು. ಎಲೆಯು ಲಘು, ಸ್ನಿಗ್ಧ, ತಂಪು, ಸಿಹಿ-ಒಗರು ಮಿಶ್ರಿತ ರಸವಿರುವುದರಿಂದ ಪುಷ್ಟಿಕಾರಕ, ಗರ್ಭವೃದ್ಧಿಕಾರಕ, ಗ್ರಾಹಿ ಕೇಶ್ಯ ಮತ್ತು ಸ್ತಂಭಕವಾಗಿರುವುದು. ದಾಹ(ಉರಿ), ಅತಿ ಸ್ರಾವವಿರುವಂತ ರೋಗಗಳು(ಮುಟ್ಟಿನ ಸ್ರಾವ, ಮೂಲವ್ಯಾಧೀಯ ಸ್ರಾವ, ಗಾಯಗಳ ಸ್ರಾವ), ಧಾತುಗಳ ಕ್ಷೀಣತೆಯಲ್ಲಿ ಲಾಭದಾಯಕವಾಗಿರುವುದು. ಕೂದಲಿಗೆ ಬಣ್ಣವನ್ನೂ ನೀಡುವುದು. ಪಿತ್ತ ಹಾಗು ಕಫದ ತೊಂದರೆಗಳಲಿ ಅವುಗಳ ಶಮನ ಮಾಡುವುದು.



## ಆಹಾರ ಮಂಜೂಷ

ಸಾಂಪ್ರದಾಯಿಕ ಆಹಾರ : ಆಯುರ್ವೇದ ಉಪಚಾರ

ಡಾ. ಚಿತ್ರಲೇಖಾ ವಿ. ಕೃಷ್ಣ M. D. (Ayu)
ತಜ್ಞ ಆಯುರ್ವೇದ ವೈದ್ಯೆ
ಶ್ರೀ ಸದ್ಗುರು ಚಿಕಿತ್ಸಾಲಯ
Ph - 9900212524



ದಾಸವಾಳವು ಕೆಲವರಲ್ಲಿ ವಾಂತಿ, ಹೊಟ್ಟೆ ಹುಳುವನ್ನುಂಟುಮಾಡುವುದು.

ಗಾಯ ಮಾಯಿಸುವುದರ ಬಗ್ಗೆ, ರಕ್ತ ಶುದ್ಧಿ, ಹೃದಯದ ಮಾಂಸ ಪೇಶಿಗಳಿಗೆ ಪುಷ್ಟಿಕರ ಅನ್ನುವುದರ ಬಗ್ಗೆ, ಮಧುಮೇಹಿಗಳಲ್ಲಿ ಗರ್ಭಧಾರಣೆಗೆ ಸಹಕಾರಿಯಾಗುವ ಬಗ್ಗೆ ಸಂಶೋಧನೆಗಳು ಫಲಪ್ರದವಾಗಿ ನೆರವೇರಿವೆ.



ದಾಸವಾಳದ ಹೂವನ್ನು ಹಾಲು(50ಮಿ.ಲಿ)- ನೀರು(50ಮಿ.ಲಿ) ಸಮ ಪ್ರಮಾಣದಲ್ಲಿಬೆರೆಸಿ ಅದರೊಂದಿಗೆ ಕುದಿಸಿ, ಅರ್ಧವಾಗುವವರೆಗೂ ಬತ್ತಿಸಬೇಕು. ನಂತರ ಕಲ್ಲುಸಕ್ಕರೆ (5ಗ್ರಾಂ) ಹಾಕಿ ಕುಡಿಯಲು ಕೊಡುವುದರಿಂದ ಹೃದ್ಯವಾಗುವುದು.

ಕೆಂಪು ದಾಸವಾಳದ ಹೂವನ್ನು ಗೋಮೂತ್ರದಲ್ಲಿ ಅರೆದು ಇಂದ್ರಲುಪ್ತವಿರುವ(ಒಂದು ಕಸಿನಷ್ಟು ಭಾಗದಿಂದ ಕೂದಲು ಉದುರಿ ನುಣ್ಣಗಾಗಿರುವುದು) ಜಾಗದಲ್ಲಿ ಹಚ್ಚಿದರೆ ಅಲ್ಲಿ 21 ದಿನಗಳ ಒಳಗೆ ಕೂದಲು ಬೆಳೆಯುವುದು.

ಎಲೆಯನ್ನಾಗಲಿ, ಹೂವನ್ನಾಗಲಿ ಜೀರಿಗೆಯೊಂದಿಗೆ ಅರೆದು ಹಚ್ಚಿದರೆ ಕೂದಲುದುರುವುದು ಹತೋಟಿಯಲ್ಲಿರುವುದು.

ಕೂದಲನ್ನು ಕಪ್ಪು ಮಾಡುವುದಕ್ಕೆ ಜನಪದ ಚಿಕಿತ್ಸೆಯೊಂದರ ಉಲ್ಲೇಖವಿದೆ. ಭೃಂಗರಾಜ ಪುಷ್ಪ ಮತ್ತು ದಾಸವಾಳದ ಪುಷ್ಪವನ್ನು ಕುರಿಯ ಹಾಲಿನಲ್ಲಿ/ ಪ್ರಾದೇಶಿಕ ಆಕಳಿನ ತಳಿಯ ಹಾಲನಲ್ಲಿ ಅರೆದು ಲೋಹದ ಪಾತ್ರೆಯಲ್ಲಿಟ್ಟು 7 ದಿನಗಳ ನಂತರ ಭೃಂಗರಾಜ ಎಲೆಯ ರಸದಲ್ಲಿ ಬೆರೆಸಿ ರಾತ್ರಿ ತಲೆಗೆ ಹಚ್ಚಬೇಕು. ಮರುದಿನ ಬೆಳಗ್ಗೆ ತಲೆತೊಳೆಯಬೇಕು.

ಬಿಳಿಯ ಮುಟ್ಟಲ್ಲಿ ಬಿಳಿ ದಾಸವಾಳವನ್ನು ತುಪ್ಪದಲ್ಲಿ ಬಾಡಿಸಿ ಕಲ್ಲು ಸಕ್ಕರೆ ಸೇರಿಸಿ ತಿನ್ನಲು ಕೊಟ್ಟು ನಂತರ ಒಂದು ಲೋಟ ಹಾಲನ್ನು ಕುಡಿಸಬೇಕು. ಬಿಳಿ ದಸವಾಳದ ಹೂವಿನಿಂದ ಮಾಡಿದ ತಂಬುಳಿಯು ರುಚಿಕರ ಪಥ್ಯವಾಗುವುದು.

ಮುಟ್ಟಿನ ಸ್ರಾವ ಅತಿಯಾದಾಗ, ಕೆಂಪು ದಾಸವಾಳದ ಹೂವನ್ನು ಹಾಲಿನಲ್ಲಿ ಅರೆದು ಖಾಲಿ ಹೊಟ್ಟೆಯಲ್ಲಿ ಕುಡಿಯಲು ಕೊಡಬೇಕು. ಹೀಗೆ ಬೆಚ್ಚನೆ ಹಾಲಿನೊಂದಿಗೆ ರಾತ್ರಿಯ ಹೊತ್ತು ಸೇವಿಸಿದರೆ ಮನಸ್ಸು ರಿಲಾಕ್ಸಾಗಿ ಒಳ್ಳೆ ನಿದ್ದೆಯೂ ಬರುವುದು.

ದಾಸವಾಳದ ಮೊಗ್ಗನ್ನು ಕಲ್ಲು ಸಕ್ಕರೆ, ನಾಗಕೇಸರದೊದಿಗೆ ತುಪ್ಪದಲ್ಲಿ ಹುರಿದು ಕಡಲೆ ಕಾಳಿನ ಗಾತ್ರದ ಮಾತ್ರೆಗಳನ್ನು ಮಾಡಿ ಶೇಖರಿಸಿಟ್ಟಿರಬೇಕು. ರಕ್ತಾತಿಸಾರ, ಮೂಲ ವ್ಯಾಧಿಯಲ್ಲಿ 2 ಮಾತ್ರೆ, ಬೆಳಗ್ಗೆ 2 ಮಾತ್ರೆ ರಾತ್ರಿ ಆಹಾರದ ಮೊದಲು ನುಂಗಲು ಕೊಟ್ಟರೆ ಅವನ್ನು ನಿಯಂತ್ರಿಸಬಹುದು.

ಕೆಂಪು ದಾಸವಾಳದ ತಂಬುಳಿಯು, ಬಿಳಿ ದಾಸವಾಳದ ಎಲೆಯ ರಸದೊಂದಿಗೆ ಕಲ್ಲುಸಕ್ಕರೆ ಸೇರಿಸಿ ಸೇವಿಸಿದರೆ ಅದು ಪಿತ್ತವನ್ನು ಇಳಿಸಿ ದೇಹಕ್ಕೆ ತಂಪನ್ನುಂಟುಮಾಡುವುದು.